## ನರಕಕ್ಕೆ ಹೋಗು



ರಾಮುವನ್ನು ಅವನ ಪತ್ನಿ ಶೀಲಾ ಕೇಳಿದಳು: 'ನೀವು ಇಂದು ಆಫೀಸಿನಿಂದ ಮನೆಗೆಯಾಕೆ ಬೇಗನೆ ಬಂದಿದ್ದೀರಿ?' ರಾಮು ನುಡಿದ: 'ಇಂದು, ಆಫೀಸಿನಲ್ಲಿ ನನ್ನ ಹಾಗೂ ಸಾಹೇಬರ ನಡುವೆ ಜಗಳವಾಯಿತು. ಸಾಹೇಬರು ಕೋಪದಿಂದ ಹೇಳಿದರು. 'ಗೋಟು ಹೆಲ್' ಎಂದು (ನರಕಕ್ಕೆ ಹೋಗು). ಅದಕ್ಕೇ ಮನೆಗೆ ಬಂದೆ!'

**ಶೋಭಾ ಪ್ರಮೋದ್**

## 'ಸರಿಯಾಗಿ ಹೇಳಿದ್ರಿ'

ತಿಪ್ಪೇಶಿ ಮಹಾ ಕುಡಕ. ಕುಡಿತದಿಂದಾಗಿ ಅವನ ಬದುಕು ಬೀದಿಗೆ ಬಿದ್ದಿತು. ಅವನ ಮಡದಿ–ಮಕ್ಕಳು ಉಪವಾಸದಿಂದ ಬಳಲುತ್ತಿದ್ದರು. ಅವನ ಹೆಂಡತಿ ವಿಚ್ಛೇದನಕ್ಕಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದಳು. ಮಾಸಿದ ತಲೆಗೂದಲು, ಹರಿದ ಬಟ್ಟೆತೊಟ್ಟಿದ್ದ ಇಬ್ಬರು ಮಕ್ಕಳೊಂದಿಗೆ ನ್ಯಾಯಾಲಯಕ್ಕೆ ಬಂದಳು. ಪ್ರಕರಣವನ್ನು ಪರಿಶೀಲಿಸಿದ ನ್ಯಾಯಾಧೀಶರು, ಅಸಮಾಧಾನದಿಂದ, 'ಕುಡಿತ! ಕುಡಿತ!! ನಿಮ್ಮ ಬಾಳು ಹಾಳು ಹಾಳಾಗಲು ಕುಡಿತವೇ ಕಾರಣ!' ಎಂದರು. ಆಗ ತಿಪ್ಪೇಶಿ ಖುಷಿಯಿಂದ 'ಮಾಯ್ ಲಾರ್ಡ್! ಸರಿಯಾಗಿ ಹೇಳಿದಿರಿ! ನಮ್ಮ ಬಾಳ್ವೆ ಹಾಳಾಗಲು ನಾನೇ– ಕಾರಣವೆಂದು. ನನ್ನ ಮೂರ್ಖ ಹೆಂಡತಿ ತಪ್ಪಾಗಿ ತಿಳಿದಿದ್ದಾಳೆ! ಅವಳಿಗೆ ಇನ್ನೊಮ್ಮೆ ತಿಳಿಸಿ ಹೇಳಿ ಹುಜೂರ್!' ಎಂದು ನಗುತ್ತಾ ಚಪ್ಪಾಳೆ ತಟ್ಟಿದ.



**ಕೆ.ಜಿ. ಭದ್ರಣ್ಣವರ**